ಅದು ಹಂಸಗಳ ಸಮೀಪಕ್ಕೆ ಹೋಗಿ ವಿನಂತಿಸಿಕೊಂಡಿತು: 'ನಾನು ಇಲ್ಲಿರಲು ಆಗದು. ನಿಮ್ಮ ಜೊತೆ ನನ್ನನ್ನೂ ಕರೆದೊಯ್ಯಿರಿ. ದಯವಿಟ್ಟು ನನಗೆ ಸಹಾಯ ಮಾಡಿ ಪ್ರಾಣವನ್ನು ಕಾಪಾಡಿ' ಎಂದು ಅಂಗಲಾಚಿಕೊಂಡಿತು. ಹಂಸಗಳಿಗೆ ಅಯ್ಯೋ ಎನಿಸಿತು. ಆದರೆ ಹಾರಲು ಸಾಧ್ಯವಾಗದ ಆಮೆಯನ್ನು ಹೇಗೆ ತಮ್ಮೊಂದಿಗೆ ಕರೆದುಕೊಂಡು ಹೋಗುವುದು ಎಂದು ಯೋಚಿಸಿದವು. ಕೊನೆಗೆ ಒಂದು ಉಪಾಯ ಹೊಳೆಯಿತು. ಅವೆರಡು ಆಮೆಯನ್ನು ಕುರಿತು ಹೇಳಿದವು: 'ನೋಡು, ನಾವಿಬ್ಬರೂ ಕಡ್ಡಿಯೊಂದರ ಎರಡು ತುದಿಗಳನ್ನು ನಮ್ಮ ಕೊಕ್ಕುಗಳಲ್ಲಿ ಗಟ್ಟಿಯಾಗಿ ಹಿಡಿದುಕೊಳ್ಳುತ್ತೇವೆ. ನೀನು ಆ ಕಡ್ಡಿಯ ಮಧ್ಯೆ ಬಾಯಿಂದ ಅದನ್ನು ಗಟ್ಟಿಯಾಗಿ ಕಚ್ಚಿ ಹಿಡಿ. ನಾವು ಹಾರಿ ನಿನ್ನನ್ನೂ ಒಯ್ಯುತ್ತೇವೆ. ಆದರೆ ಎಚ್ಚರ – ನಾವು ಮೇಲೆ ಹಾರಾಟದಲ್ಲಿರುವಾಗ ನೀನು ಯಾವುದೇ ಕಾರಣಕ್ಕೂ ಬಾಯಿ ತೆರೆಯಬಾರದು. ಹಾಗೆ ಒಂದು ವೇಳೆ ನೀನು ಬಾಯಿ ತೆರೆದರೆ ಅಪಾಯ ಕಟ್ಟಿಟ್ಟ ಬುತ್ತಿ'.

ಕಡ್ಡಿಯ ತುದಿಗಳನ್ನು ಕಚ್ಚಿಕೊಂಡ ಹಂಸಗಳು ಹಾರಲು ತೊಡಗಿದವು. ಕಡ್ಡಿಯನ್ನು ಕಚ್ಚಿ ಹಿಡಿದಿದ್ದ ಆಮೆಯೂ ಜೊತೆಯಲ್ಲಿ ಹಾರಾಟದಲ್ಲಿತ್ತು. ಹೀಗೆ ಈ ಹಾರಾಟ ಹಳ್ಳಿಯೊಂದರ ಮೇಲೆ ಸಾಗಿತ್ತು. ಅಲ್ಲಿಯ ಜನರು ಈ ಹಾರಾಟದ ಆಶ್ಚರ್ಯವನ್ನು ಕಂಡು ಬೆರಗಾದರು. ಹಲವರು ಏನೇನೋ ಮಾತನಾಡತೊಡಗಿದರು. ಆಮೆ ಎಲ್ಲವನ್ನು ಕೇಳಿಸಿಕೊಳ್ಳುತ್ತಿತ್ತು. ಅದಕ್ಕೆ ಮೊದಲೇ ಮಾತಿನ ಚಟ. ಅಷ್ಟು ಹೊತ್ತು ಅದು ಬಾಯಿ ತೆರೆಯದೇ ಇದ್ದದ್ದೇ ಅದೃಷ್ಟ. ಆದರೆ ಆ ಮಾತುಗಳನ್ನು ಕೇಳಿಕೊಂಡು ಸುಮ್ಮನೆ ಇರಲಾಗಲಿಲ್ಲ. ಜನರ ಮಾತಿಗೆ ಉತ್ತರ ಕೊಡಲು ಅದು ಬಾಯನ್ನು ತೆಗೆದೇ ಬಿಟ್ಟಿತು. ಕೂಡಲೇ ಅದು ಮೇಲಿಂದ ನೆಲಕ್ಕೆ ಬಿದ್ದು ಸತ್ತುಹೋಯಿತು.

★★★

ಇದೊಂದು ತುಂಬ ಜನಪ್ರಿಯ ಕಥೆ. ಮಕ್ಕಳಿಗೆ ನೀತಿ ಹೇಳಲು ಹೊರಟಿರುವ ಕಥೆ ಎಂದು ಸುಲಭವಾಗಿ ಸಮೀಕರಿಸಬಹುದಾದದ್ದು. ಆದರೆ ಇದು ದೊಡ್ಡವರಿಗೂ ಮಾರ್ಗದರ್ಶಕವಾಗಬಲ್ಲದ್ದು. ನಮ್ಮ ಸ್ವಭಾವವನ್ನು ಬದಲಾಯಿಸಿಕೊಳ್ಳಲು ಎಷ್ಟು ಕಷ್ಟ ಎನ್ನುವುದನ್ನು ಈ ಕಥೆ ನಿರೂಪಿಸುವಂತಿದೆ. ಮಾತಿನ ಚಟ ನಮಗೆ ಎಷ್ಟು ಮಾರಕವಾಗಬಲ್ಲದು ಎನ್ನುವುದಕ್ಕೆ ಈ ಕಥೆಯಲ್ಲಿಯ ಆಮೆ ಉದಾಹರಣೆಯಾಗಿದೆ.

ಮಾತನಾಡುವುದು ಆಮೆಗೆ ಒಂದು ಚಟವಾಗಿತ್ತು. ಅದೂ ಬೇರೆಯವರು ಮಾತನಾಡುತ್ತಿದ್ದರೆ ಸುಮ್ಮನೆ ಅದನ್ನು ಕೇಳಿಕೊಂಡು ಇರುವುದು ಅದರ ಸ್ವಭಾವವಲ್ಲ. ಅದರ ಈ ಚಟದ ಕಾರಣದಿಂದಾಗಿಯೇ ಅದು ಪ್ರಾಣವನ್ನು ಕಳೆದುಕೊಳ್ಳಬೇಕಾಯಿತು.

ಮಾತಿಲ್ಲದೆ ನಮ್ಮ ಜೀವನವಿಲ್ಲ. ಮನುಷ್ಯನ ಜೀವನವನ್ನು ಇತರ ಪ್ರಾಣಿಗಳ ಜೀವನಕ್ಕಿಂತಲೂ ಪ್ರತ್ಯೇಕವನ್ನಾಗಿಯೂ ವಿಶೇಷವನ್ನಾಗಿಯೂ ಮಾಡಿರುವುದೇ 'ಮಾತು'. ಮಾತು ಇಡಿಯ ನಮ್ಮ ಜೀವನವನ್ನು ಕಟ್ಟುತ್ತಿರುತ್ತದೆ; ಅದೇ ಮಾತು ನಮ್ಮ ಬದುಕನ್ನು ಕೆಡವಲೂಬಹುದು. ಕೆಲವೊಮ್ಮೆ ಮಾತನ್ನು ಆಡದಿರುವುದೇ ನಮ್ಮ ಜೀವನವನ್ನೂ ಜೀವವನ್ನೂ ಉಳಿಸಬಲ್ಲ ದಿಟವಾದ 'ಮಾತು' ಆಗಿರುತ್ತದೆ. ಒಂದು ಸಂಸ್ಕೃತಿಯನ್ನೇ ನಿರ್ಮಿಸಬಲ್ಲ ಶಕ್ತಿ ಮಾತಿಗಿದೆ. ಮಾತು ನಮ್ಮ ಸಂಸ್ಕೃತಿ–ಸಂಸ್ಕಾರಗಳನ್ನು ಪ್ರಕಟಿಸುವ ಕನ್ನಡಿ ಇದ್ದಂತೆ. ಹೀಗಾಗಿ ಜೀವರಕ್ಷಕವಾದ ಮಾತು ಎನ್ನುವುದು ನಮ್ಮ ನಾಲಿಗೆ ಉಲಿಯುವ ಧ್ವನಿರೂಪದ ಶಬ್ದಾತ್ಮಕವಾದುದೇ ಆಗಿರಬೇಕಿಲ್ಲ; ಅದು ಮೌನದ ರೂಪದಲ್ಲೂ ಇರಬಹುದು. ಆ ಆಮೆ